# ಕರ್ನಾಟಕ ವಿಧಾನ ಪರಿಷತ್

| | | |
|---|---|---|
| ಮಾನ್ಯ ಸದಸ್ಯರ ಹೆಸರು | : | ಶ್ರೀ ಕೇಶವ ಪ್ರಸಾದ್. ಎಸ್ |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | **718** |
| ಉತ್ತರಿಸಬೇಕಾದ ದಿನಾಂಕ | : | **21.02.2024** |
| ಉತ್ತರಿಸಬೇಕಾದ ಸಚಿವರು | : | ವಸತಿ ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ವಸತಿ ರಹಿತರಿಗೆ ಸೂರು ಕಲ್ಪಿಸುವ ಉದ್ದೇಶದಿಂದ ಜಾರಿಗೆ ತರಲಾಗಿದ್ದ ಆಶ್ರಯ ಯೋಜನೆ ರದ್ದುಗೊಂಡಿದೆಯೇ; | ಇಲ್ಲ<br><br>ಗ್ರಾಮೀಣ ಮತ್ತು ನಗರ ಆಶ್ರಯ ಯೋಜನೆಯನ್ನು ವಿವಿಧ ಕಾಲಘಟ್ಟಗಳಲ್ಲಿ ಮರು ನಾಮಕರಣ ಮಾಡಿ ಈ ಕೆಳಕಂಡ ವಸತಿ / ನಿವೇಶನ ಯೋಜನೆಗಳನ್ನು ಸರ್ಕಾರವು ನಿಗಮದ ಮೂಲಕ ಅನುಷ್ಠಾನಗೊಳಿಸುತ್ತಿದೆ.<br><br>**ವಸತಿ ಯೋಜನೆ:**<br>1. ಬಸವ ವಸತಿ ಯೋಜನೆ<br>2. ಪ್ರಧಾನ ಮಂತ್ರಿ ಆವಾಸ್ ಯೋಜನೆ (ಗ್ರಾಮೀಣ)<br>3. ಡಾ. ಬಿ.ಆರ್. ಅಂಬೇಡ್ಕರ್ ನಿವಾಸ್ ಯೋಜನೆ (ಗ್ರಾಮೀಣ & ನಗರ)<br>4. ದೇವರಾಜು ಅರಸು ವಸತಿ ಯೋಜನೆ (ಗ್ರಾಮೀಣ & ನಗರ)<br>5. ವಾಜಪೇಯಿ ನಗರ ವಸತಿ ಯೋಜನೆ<br><br>**ನಿವೇಶನ ಯೋಜನೆಗಳು**:<br>1. ಮುಖ್ಯಮಂತ್ರಿಗಳ ನಗರ ನಿವೇಶನ ಯೋಜನೆ<br>2. ಮುಖ್ಯಮಂತ್ರಿಗಳ ಗ್ರಾಮೀಣ ನಿವೇಶನ ಯೋಜನೆ |
| ಆ) | ಆಶ್ರಯ ಯೋಜನೆಯಡಿ ಈವರೆಗೆ ಎಷ್ಟು ಜನರಿಗೆ ನಿವೇಶನ ಹಂಚಿಕೆ ಮಾಡಲಾಗಿದೆ; ಎಷ್ಟು ಜನರಿಗೆ ಸದರಿ ನಿವೇಶನದಲ್ಲಿ ಮನೆ ನಿರ್ಮಾಣಕ್ಕೆ ಅನುದಾನ ಮಂಜೂರು/ಬಿಡುಗಡೆ ಮಾಡಲಾಗಿದೆ; (ಜಿಲ್ಲಾವಾರು ವಿವರ ನೀಡುವುದು) | ಗ್ರಾಮೀಣ ಹಾಗೂ ನಗರ ನಿವೇಶನ ಯೋಜನೆಗಳಡಿ ನಿವೇಶನ ಹಂಚಿಕೆ ಮಾಡಲು ನಿಗಮದಿಂದ ಹಕ್ಕುಪತ್ರ ನೀಡಲಾಗುತ್ತಿದ್ದು, 2004-05ನೇ ಸಾಲಿನಿಂದ ಇಲ್ಲಿಯವರೆಗೆ (ಜನವರಿ-2024ರ ಅಂತ್ಯಕ್ಕೆ) ಗ್ರಾಮೀಣ ನಿವೇಶನ ಯೋಜನೆಯಡಿ 136380 ಮತ್ತು ನಗರ ನಿವೇಶನ ಯೋಜನೆಯಡಿ 110152 ಒಟ್ಟು **246532** ನಿವೇಶನಗಳನ್ನು ಹಂಚಿಕೆ ಮಾಡಲಾಗಿದೆ.<br><br>**ಜಿಲ್ಲಾವಾರು ವಿವರ ಅನುಬಂಧ-1 ರಲ್ಲಿ ಒದಗಿಸಲಾಗಿದೆ.**<br><br>ಸರ್ಕಾರದ ಯೋಜನೆಗಳಡಿ ನಿವೇಶನ ಪಡೆದ ಫಲಾನುಭವಿಗಳನ್ನು ಆದ್ಯತೆ ಮೇಲೆ ಪರಿಗಣಿಸಿ, ಸರ್ಕಾರವು ಪ್ರತಿ ವರ್ಷ ಆಯವ್ಯಯದಲ್ಲಿ ನಿಗದಿಪಡಿಸುವ ಅನುದಾನಕ್ಕೆ ಅನುಗುಣವಾಗಿ ವಿವಿಧ ವಸತಿ ಯೋಜನೆಗಳಡಿ ವಸತಿ ಸೌಕರ್ಯ ಕಲ್ಪಿಸಲಾಗುತ್ತಿದೆ. ಸರ್ಕಾರದಿಂದ ನಿವೇಶನ ಪಡೆದ ಎಲ್ಲಾ ಅರ್ಹ ಫಲಾನಭವಿಗಳಿಗೆ ಹಂತ ಹಂತವಾಗಿ ವಸತಿ ಸೌಕರ್ಯ ಕಲ್ಪಿಸಲು ಕ್ರಮವಹಿಸಲಾಗುತ್ತಿದೆ. |
| ಇ) | ಆಶ್ರಯ ಯೋಜನೆಯಡಿ ಹಂಚಿಕೆಯಾದ ಎಲ್ಲಾ ನಿವೇಶನಗಳಿಗೆ ಹಕ್ಕುಪತ್ರ ನೀಡಲಾಗಿದೆಯೇ; ಎಷ್ಟು ಜನರಿಗೆ ಹಕ್ಕುಪತ್ರ ನೀಡಲು ಬಾಕಿ ಇದೆ; (ಜಿಲ್ಲಾವಾರು ಮಾಹಿತಿ ನೀಡುವುದು) | ಮುಖ್ಯಮಂತ್ರಿಗಳ ಗ್ರಾಮೀಣ ಮತ್ತು ನಗರ ನಿವೇಶನ ಯೋಜನೆಗಳಡಿ ಗ್ರಾಮಸಭೆ/ನಗರ ಆಶ್ರಯ ಸಮಿತಿಯಲ್ಲಿ ಆಯ್ಕೆಯಾದ ಅರ್ಹ ಫಲಾನುಭವಿಗಳ ಮಾಹಿತಿಯನ್ನು ಗ್ರಾಮ ಪಂಚಾಯತಿ/ನಗರ ಸ್ಥಳೀಯ ಸಂಸ್ಥೆಗಳ ಲಾಗಿನ್ ನಲ್ಲಿ ನಮೂದಿಸಿ, ಜಿಲ್ಲಾಧಿಕಾರಿಗಳ ಶಿಫಾರಸ್ಸಿನೊಂದಿಗೆ ಆನ್‌ಲೈನ್ ಮೂಲಕ ನಿಗಮದಲ್ಲಿ ಸ್ವೀಕೃತವಾಗುವ ಪ್ರಸ್ತಾವನೆಗಳಿಗೆ ಸರ್ಕಾರದ ಅನುಮೋದನೆ ಪಡೆದು ನಿಗಮದಿಂದ ಹಕ್ಕುಪತ್ರಗಳನ್ನು |

| | | |
|---|---|---|
| ಈ) | ಹಕ್ಕುಪತ್ರ ನೀಡಲು ಬಾಕಿ ಇರುವವರಿಗೆ ಯಾವ ಕಾಲಮಿತಿಯೊಳಗೆ ಹಕ್ಕುಪತ್ರ ನೀಡಲಾಗುವುದು; ಇದಕ್ಕಾಗಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು; | ನೀಡಲಾಗುತ್ತಿದೆ.<br><br>ಗ್ರಾಮಸಭೆ/ನಗರ ಆಶ್ರಯ ಸಮಿತಿಯಲ್ಲಿ ಆಯ್ಕೆಗೊಂಡ ಅರ್ಹ ಫಲಾನುಭವಿಗಳಿಗೆ ನಿವೇಶನ ಹಂಚಿಕೆ ಮಾಡಲಾಗುತ್ತಿದ್ದು, ನಿವೇಶನ ಹಂಚಿಕೆಗೆ ಯಾವುದೇ ಕನಿಷ್ಟ ಅಥವಾ ಗರಿಷ್ಟ ಗುರಿ ಹಾಗೂ ಯಾವುದೇ ಕಾಲಮಿತಿಯನ್ನು ನಿಗದಿಪಡಿಸಿರುವುದಿಲ್ಲ.<br><br>ನಿವೇಶನರಹಿತ ಅರ್ಹ ಕುಟುಂಬಗಳಿಗೆ ನಿವೇಶನ ಹಂಚಿಕೆ ಮಾಡಲು ಸರ್ಕಾರಿ ಜಮೀನಿಗೆ ಪ್ರಥಮ ಆದ್ಯತೆ ನೀಡಲಾಗಿದ್ದು, ಸ್ಥಳೀಯವಾಗಿ ಲಭ್ಯವಿರುವ ಸರ್ಕಾರಿ ಗೋಮಾಳ ಜಮೀನನ್ನು ಮಂಜೂರು ಮಾಡಿಸಿಕೊಂಡು ನಿವೇಶನ ಹಂಚಿಕೆಗೆ ಬಳಸಿಕೊಳ್ಳಬಹುದಾಗಿದೆ. ಒಂದು ವೇಳೆ ಸರ್ಕಾರಿ ಜಮೀನು ಲಭ್ಯವಿಲ್ಲದ ಕಡೆಗಳಲ್ಲಿ ಮಾತ್ರ ಖಾಸಗಿ ಜಮೀನು ಖರೀದಿಗೆ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯ ಜಿಲ್ಲಾ ಜಮೀನು ಖರೀದಿ ಸಮಿತಿ ಮೂಲಕ ಕ್ರಮವಹಿಸಲಾಗುತ್ತಿದೆ. ಹೀಗೆ ಮಂಜೂರಾದ ಸರ್ಕಾರಿ/ಖರೀದಿಸಲಾದ ಖಾಸಗಿ ಜಮೀನನ್ನು ಬಳಸಿಕೊಂಡು ನಿವೇಶನರಹಿತರ ಸಂಖ್ಯೆಗೆ ಅನುಗುಣವಾಗಿ ಹಂತ ಹಂತವಾಗಿ ನಿವೇಶನ ಹಂಚಿಕೆಗೆ ಕ್ರಮವಹಿಸಲಾಗುತ್ತಿದೆ. |
| ಉ) | ಆಶ್ರಯ ಯೋಜನೆ ಕುರಿತು ಉಚ್ಚ ನ್ಯಾಯಾಲಯ ವ್ಯಕ್ತಪಡಿಸಿರುವ ಅಭಿಪ್ರಾಯವೇನು; ನ್ಯಾಯಾಲಯದ ಅಭಿಪ್ರಾಯ ಕುರಿತು ಸರ್ಕಾರದ ನಿಲುವೇನು ? | ಮಾನ್ಯ ಉಚ್ಚ ನ್ಯಾಯಾಲಯದ ಅಭಿಪ್ರಾಯದ ಬಗ್ಗೆ ಮಾಹಿತಿ ಇರುವುದಿಲ್ಲ. |

ಸಂಖ್ಯೆ: ವಇ 56 ಹೆಚ್‌ಎಂ 2024

(ಬಿ.ಝಡ್. ಜಮೀರ್ ಅಹ್ಮದ್ ಖಾನ್)
ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ
ಸಚಿವರು

ಅನುಬಂಧ-1

2004-2005 ನೇ ಸಾಲಿನಿಂದ ಇಲ್ಲಿಯವರೆಗೆ (ಜನೇವರಿ-2024) ಗ್ರಾಮೀಣ ಮತ್ತು ನಗರ ಪ್ರದೇಶದಲ್ಲಿ ಹಂಚಿಕೆ ಮಾಡಿದ ಹಕ್ಕುಪತ್ರಗಳ ವಿವರ

| ಜಿಲ್ಲೆ | ಗ್ರಾಮೀಣ ಪ್ರದೇಶದಲ್ಲಿ ಹಂಚಿಕೆ ಮಾಡಿದ ಹಕ್ಕುಪತ್ರಗಳ ವಿವರ | ನಗರ ಪ್ರದೇಶದಲ್ಲಿ ಹಂಚಿಕೆ ಮಾಡಿದ ಹಕ್ಕುಪತ್ರಗಳ ವಿವರ | ಒಟ್ಟು ಹಂಚಿಕೆ ಮಾಡಿದ ಹಕ್ಕುಪತ್ರಗಳ ವಿವರ |
|---|---|---|---|
| Bagalkot | 6475 | 13238 | 19713 |
| Ballari | 1576 | 8228 | 9804 |
| Belagavi | 5256 | 5547 | 10803 |
| Bengaluru Rural | 2585 | 1193 | 3778 |
| Bengaluru Urban | 14036 | 4214 | 18250 |
| Bidar | 1605 | 1224 | 2829 |
| Chamarajanagar | 1360 | 1597 | 2957 |
| Chikkaballapura | 12483 | 5127 | 17610 |
| Chikkamagaluru | 2687 | 1735 | 4422 |
| Chitradurga | 7576 | 2393 | 9969 |
| DakshinaKannada | 5131 | 1235 | 6366 |
| Davanagere | 7404 | 9618 | 17022 |
| Dharwad | 1905 | 3378 | 5283 |
| Gadag | 7798 | 9339 | 17137 |
| Hassan | 3198 | 1744 | 4942 |
| Haveri | 5670 | 4994 | 10664 |
| Kalaburagi | 1497 | 7277 | 8774 |
| Kodagu | 1687 | 299 | 1986 |
| Kolar | 855 | 2247 | 3102 |
| Koppal | 5294 | 4522 | 9816 |
| Mandya | 1884 | 234 | 2118 |
| Mysuru | 4236 | 3214 | 7450 |
| Raichur | 4696 | 2709 | 7405 |
| Ramanagara | 6118 | 3021 | 9139 |
| Shivamogga | 5903 | 2723 | 8626 |
| Tumakuru | 4277 | 2167 | 6444 |
| Udupi | 4251 | 209 | 4460 |
| UttaraKannada | 1081 | 166 | 1247 |
| Vijayanagara | 4198 | 2044 | 6242 |
| Vijayapura | 1730 | 2760 | 4490 |
| Yadgiri | 1928 | 1756 | 3684 |
| **Grand Total** | **136380** | **110152** | **246532** |